Geetha Shishu Shikshana Sangha (R)

GSSS SIMHA SUBBAMAHALAKSHMI FIRST GRADE COLLEGE

KRS ROAD, MYSURU-570 016

ಯಶಸ್ YASHAS SSFGC Weekly Newsletter

Volume-2 Issue No-37 9 FEB 2020

ಮನ ಮಂಥನ ಕೃತಿ ಬಿಡುಗಡೆ

## ಮನುಷ್ಯನ ಅಪರಿಮಿತ ಆಸೆಗಳೇ ದುರಂತಕ್ಕೆ ಕಾರಣ

ಪ್ರೊ. ಮೊರಬದ ಮಲ್ಲಿಕಾರ್ಜುನ

ಸಂವಹನ ಪ್ರಕಾಶನ ಮತ್ತು ಜಿಎಸ್ ಎಸ್ ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಪ್ರೊ.ಜಿ.ಚಂದ್ರಶೇಖರ ಅವರ "ಮನ ಮಂಥನ" ಪ್ರಬಂಧ ಸಂಕಲನ ಬಿಡುಗಡೆ ಕಾರ್ಯಕ್ರಮ ದಿನಾಂಕ 6.2.2020ರಂದು ನಡೆಯಿತು.



ಮುಖ್ಯ ಅತಿಥಿಗಳಾಗಿಭಾಗವಹಿಸಿದ ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರಾದ ಮೊರಬದ ಮಲ್ಲಿಕಾರ್ಜುನ ಅವರು ಕೃತಿ ಕುರಿತು, "ಮನ ಮಂಥನ ಪ್ರಬಂಧ ಸಂಕಲನ ವರ್ತಮಾನದ ಮೇಲೆ ಬೆಳಕು ಚೆಲ್ಲುತ್ತಿದ್ದು, ಜಾಗತಿಕ ಮಟ್ಟದ ದಾರ್ಶನಿಕರ ಹಿನ್ನೆಲೆಯಲ್ಲಿ ಅರ್ಥೈಸುತ್ತದೆ ಹಾಗೂ ಮನುಷ್ಯನ ಅಪರಿಮಿತ ಆಸೆಗಳೆ ದುರಂತಕ್ಕೆ ಕಾರಣ ಎಂದು ಹೇಳಿದರು. ಆಧುನಿಕ ಯುಗದಲ್ಲಿ ಯುವಕ ಯುವತಿಯರು ತಂತ್ರಜ್ಞಾನ ಮೊಬೈಲ್ ಕ್ರೀಡೆಗಳ ಮೂಲಕ ಮಾನವೀಯ ಸಂಬಂಧಗಳಿಂದ ದೂರಾಗಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ದೇಹ ಮನಸ್ಸುಗಳ ಕುರಿತಾದ ಈ ಪುಸ್ತಕ ಅವರಿಗೆ ಅಗತ್ಯ ಕೈಪಿಡಿಯಾಗಬಹುದು" ಎಂದು ಹೇಳಿದರು. ಮುಂದುವರಿದು ಈ ಕೃತಿಯಲ್ಲಿರುವ ಲೇಖನಗಳು ಒಂದೊಂದು ಮನಸ್ಸು ಮತ್ತು ಮಿದುಳನ್ನು ಜಾಗೃತವಾಗುವಂತೆ ಹಾಗೂ ಆರೋಗ್ಯ ಪೂರ್ಣವಾಗಿರುವಂತೆ ಎಚ್ಚರಿಸುತ್ತವೆ. ಪ್ರತಿಯೊಂದು ಪ್ರಬಂಧವೂ ಮನೋವಿಶ್ಲೇಷಣಾತ್ಮಕ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು ವೈಶಿಷ್ಟ್ಯಪೂರ್ಣವಾಗಿವೆ. ಈ ಕೃತಿಯಲ್ಲಿ ಬಳಕೆಯಾಗಿರುವ ಭಾಷೆ ಚೇತೋಹಾರಿಯಾಗಿದ್ದು, ಜೀವನದಲ್ಲಿ ಪಡೆದದ್ದನ್ನು ಮತ್ತೊಬ್ಬರಿಗೆ ತಲುಪಿಸಬೇಕೆಂಬ ಅಂಶಗಳು ದಟ್ಟವಾಗಿವೆ. ಯಾವುದೇ ಮನಷ್ಯ ಜೀವನದಲ್ಲಿ ಬದುಕಬೇಕಾದರೆಆಲೋಚನ ಪೂರ್ಣವಾದ ಚಿಂತನೆಗಳು ಮುಖ್ಯ ಎಂದು ಗಮನ ಸೆಳೆದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ನಿರ್ದೇಶಕರಾದ ಡಾ ಕೆ.ವಿ. ಪ್ರಭಾಕರ ಅವರು ಮಾತನಾಡುತ್ತಾ ಈ ಕೃತಿ ಭೌತಿಕತೆಯಿಂದ ಮನಸ್ಸಿನ ಕಡೆಗೆ ಹೊರಟ ಕೃತಿಯಾಗಿದೆ. ಎಲ್ಲ ಲೇಖನಗಳು ತುಂಬಾ ಮೌಲಿಕವಾಗಿದ್ದು, ಕೃತಿಕಾರರ ಚಿಂತನೆಗಳು ಸಾರ್ವಕಾಲಿಕವಾಗಿವೆ ಎಂದರು.

ರಾಜೇಂದ್ರ ಪ್ರಿಂಟರ್ಸ್‌ನ ಡಿ.ಎನ್ ಲೋಕಪ್ಪ ಅವರು ನುಡಿಗೌರವವನ್ನು ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ನಗರದ ಹಲವಾರು ಚಿಂತಕರು ಮತ್ತು ಸಾಹಿತ್ಯ ಪ್ರೇಮಿಗಳು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಸಪ್ಪ ಅವರು ಸ್ವಾಗತಿಸಿದರೆ, ಕನ್ನಡ ವಿಭಾಗದ ಮುಖ್ಯಸ್ಥರಾದ ಮಹದೇವ ಕೆ.ಎಂ ಅವರು ವಂದಿಸಿ, ನಿರೂಪಿಸಿದರು.



## ಸ್ಥಳೀಯ ಪರಿಶೀಲನಾ ಸಮಿತಿ ಭೇಟಿ – L I C

ಮೈಸೂರು ವಿಶ್ವ ವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿ ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಕಡತಗಳನ್ನು ಪರಿಶೀಲಿಸಿ, ಪ್ರಗತಿಯ ಬಗೆಗೆ ಮೆಚ್ಚುಗೆ ಸೂಚಿಸಿದರು. ತಂಡದಲ್ಲಿ ಪ್ರೊ.ವೆಂಕಟೇಶ ಕುಮಾರ್, ಪ್ರೊ. ಶ್ರೀಧರ್, ಪ್ರೊ. ನಾಗರಾಜ್ ಮತ್ತು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಶ್ರೀಕಂಠಸ್ವಾಮಿ ಮೊದಲಾದವರಿದ್ದರು.

ಸಮಿತಿಯ ಒದಿಗೆ ಆಡಳಿತ ಮಂಡಳಿಯ ಸದಸ್ಯರು,
ನಿರ್ದೇಶಕರು ಮತ್ತು ಪ್ರಾಂಶುಪಾಲರು

University of Mysuru visits its affiliated colleges annually to inspect the working of the various colleges under its jurisdiction. Local Inspection Committee comprising 5 members headed by the CDC director Srikantaswamy and others visited the college on 06/02/2020.They were welcomed by the Management members, Director, Principal and the Staff of the college.

They inspected all the records and books maintained by the college , the facilities provided to the students and enquired about the add in courses being conducted in the college.

They met the Hon.Secretary Smt Vanaja Pandit and the Administrative Officer GSSS Institutions, Smt Anupama Pandit who were present on the occasion

## Agri com Add on Course



ಕಾಲೇಜು ನೀಡುತ್ತಿರುವ Agri com Add on Course ಇದರ ಭಾಗವಾಗಿ ಲ್ಯಾಬ್ ಲ್ಯಾಂಡನ ಮುಖ್ಯಸ್ಥರಾದ ಡಾ. ಸುಧೀರ ಶೆಟ್ಟಿ ಅವರೊಂದಿಗೆ ಮಾತುಕತೆ ನಡೆಯಿತು, ಪ್ರಯೋಗಾಲಯದಲ್ಲಿ ಕಸಿ ಮಾಡುವ ವಿಧಾನ, ಗಿಡಗಳ ಆರೈಕೆ, ಪೂರೈಕೆ ಅದರ ವ್ಯಾವಹಾರಿಕ ವಿಚಾರಗಳನ್ನು ಚರ್ಚಿಸಿ ಇದೆಲ್ಲವನ್ನು Agri com ನ ಆಡಿಯಲ್ಲಿ ವಿದ್ಯಾರ್ಥಿಗಳಿಗೆ ಪರಿಚಯಿಸುವ ಬಗೆಗೆ ಚರ್ಚಿಸಲಾಯಿತು.

Agri-Com is the one of the Add-On Course being introduced in the college in the present semester. The main objective of the course is to acquaint the students with the agricultural practices , take it up as a hobby and create awareness about Green environment .

As the coordinator of the course I had visited Lab land Biotechs along with our faculty Namith P N on 08 /02/2020 .We met the Director of the institution Sri Sudheer Shetty and talked about the various issues about which he could guide us in successful conduct of the course. He agreed to give a talk on Commercial activities in agriculture and to have an interaction session with our students .

We were taken around the nursery which had a collection of Anthoriums and other ornamental plants. In addition to that we were also briefed about tissue culture of plants being done at the Lab .

## ಗೀತಾ ಸಂಹಿತಾ 2020




ಕಾಲೇಜಿನ ತಾಂತ್ರಿಕ ಸಾಂಸ್ಕೃತಿಕ ಹಬ್ಬ ಗೀತಾ ಸಂಹಿತಾ 2020, ವಿದ್ಯಾರ್ಥಿಗಳಲ್ಲಿ ಅಡಗಿರುವ ತಾಂತ್ರಿಕ, ವ್ಯಾವಹಾರಿಕ ಮತ್ತು ನಿರ್ವಹಣೆ, ಸಾಂಸ್ಕೃತಿಕ ಕಲೆಗಳಲ್ಲಿನ ಪ್ರಾವಿಣ್ಯತೆಯನ್ನು ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ. ವಿವಿಧ ಸ್ಪರ್ಧೆಗಳಾದ ಉತ್ತಮ ಉದ್ಯಮಿ, ಮಾರುಕಟ್ಟೆ ನಿರ್ವಹಣೆ, ಗೂಗಲ್ ಹಂಟ್, ಟ್ರೆಶರ್ ಹಂಟ್ ಹಾಗೂ ಸಮೂಹ ನೃತ್ಯಗಳನ್ನು ಒಳಗೊಂಡ ಈ ಹಬ್ಬ ಮೈಸೂರು ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿಗಳಿಗೆ ಇದು ಒಂದು ಉತ್ತಮ ವೇದಿಕೆಯಾಗಿದೆ.

ಕಾಲೇಜಿನ ನಿರ್ದೇಶಕರು ಇದರ ಪ್ರಗತಿಯನ್ನು ಕುರಿತು 8/2/2020 ರಲ್ಲಿಸಭೆ ನಡೆಸಿ ಪರಿಶೀಲಿಸಿದರು.



## ರಾ.ಸೇ.ಯೋ – ವಿನಿಮಯ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾ.ಸೇ.ಯೋ ಅಧಿಕಾರಿಗಳು ಮತ್ತು ಸ್ವಯಂಸೇವಕರು ಕಾಲೇಜಿಗೆ ಭೇಟಿನೀಡಿದರು. ಅ ಸಂದರ್ಭದಲ್ಲಿ ನಿರ್ದೇಶಕರು ರಾಷ್ಟ್ರೀಯ ಸೇವಾ ಯೋಜನೆಯ ಬಗೆಗೆ ಹಲವಾರು ಮಹತ್ವದ ವಿಚಾರಗಳನ್ನು ಚರ್ಚಿಸಿದರು. ವಿದ್ಯಾರ್ಥಿಗಳಿಗೆ ಡಾ.ಧರ್ಮೇಶ್ ರಾಷ್ಟ್ರೀಯ ಸೇವಾ ಯೋಜನೆಯ ಬಗೆಗೆ ಮಾಹಿತಿ ನೀಡಿದರು.



ಮೈಸೂರು ವಿಶ್ವ ವಿದ್ಯಾನಿಲಯದ2018–19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಅತ್ಯುತ್ತಮ ಸ್ವಯಂ ಸೇವಕ ಪ್ರಶಸ್ತಿಗೆ ಬಿ.ಕಾಂ ವಿದ್ಯಾರ್ಥಿ ಶ್ರೀ ದರ್ಶನ್ ಎಂ ಅವರು ಆಯ್ಕೆಗೊಂಡಿದ್ದಾರೆ, ಅವರಿಗೆ ಅಭಿನಂದನೆಗಳು.



ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ರತ್ನಪುರಿಯಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಡಿ.ದೇವರಾಜ ಅರಸು ಪ್ರಥಮದರ್ಜೆ ಕಾಲೇಜು ಹುಣಸೂರು ಇವರ ಸಹಯೋಗದೊಂದಿಗೆ 26.01.2020 ರಿಂದ 01.02.2020 ರವರೆಗೆ ನಡೆದ ಜಿಲ್ಲಾ ಮಟ್ಟದ ಅಂತರ ಕಾಲೇಜು ವಾರ್ಷಿಕ ಶಿಬಿರದಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ಲಿಖಿತಾ ಎಸ್ ಪಾಲ್ಗೊಂಡು ಉತ್ತಮ ಸಾಧನೆಗೈದಿದ್ದಾರೆ ಅವರಿಗೆ ಅಭಿನಂದನೆಗಳು.



ದಿನಾಂಕ 03.02.2020 ರಂದು ಮೈಸೂರು ನಗರದ ಮಹಾಜನ ಕಾಲೇಜಿನಲ್ಲಿ ನಡೆದ ಇಂಡೋ–ಜಪಾನ್ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಪ್ರೊ. ಸುಬ್ರಹ್ಮಣ್ಯ ಅವರು ಪಾಲ್ಗೊಂಡಿದ್ದರು.

## ಮನಮಂಥನ ಕೃತಿ ಬಿಡುಗಡೆ ಸಮಾರಂಭ – ಸಚಿತ್ರ



ಸಾಹಿತ್ಯಾಭಿಮಾನಿಗಳು



ಕೃತಿ ಕುರಿತು



ಮುಖ್ಯ ಅತಿಥಿಗಳಿಗೆ ಗೌರವ



ಕೃತಿ ಬಿಡುಗಡೆ



ಡಾ.ಕೆ.ವಿ.ಪ್ರಭಾಕರ ಅವರು ಅಧ್ಯಕ್ಷಿಯ ಭಾಷಣ ಮಾಡುತ್ತಿರುವುದು.



ಪ್ರಕಾಶಕರಿಂದ ಲೇಖಕರಿಗೆ ಗೌರವ ಸಮರ್ಪಣೆ



ವಾರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿರ್ದೇಶಕರು, ಪ್ರಾಂಶುಪಾಲರು ಮತ್ತು ಅಧ್ಯಾಪಕರು



ದ್ವಿದರ್ಜೆ ಸಹಾಯಕಿ ಶ್ರೀಮತಿ ಶ್ರೀದೇವಿ




ಕಛೇರಿ ಸಹಾಯಕ ಶ್ರೀ ಭಾಸ್ಕರ

**Add On Course**



ಲ್ಯಾಬ್ ಲ್ಯಾಂಡನ ಪ್ರಯೋಗಾಲಯ



ಲ್ಯಾಬ್ ಲ್ಯಾಂಡನ ಡಾ ಸುಧೀರ್ ಶೆಟ್ಟಿ ಅವರೊಂದಿಗೆ

> I hold the opinion firmly that civil disobedience is the purest type of constitutional agitation. Of Course, it becomes degrading and despicable, if its civil, i.e. non-violent character is a mere camouflage.
>
> Young India 15-12-21

**Chief Editor**
Prof K U Basappa, Principal
**Executive Editor**
Mr Subramanya K R, HOD, Dept of BBA
Mr Mahadeva K M , HoD, Dept of Kannada
Mr Sampath Kumar, Librarian

**Photo courtesy**
Dr. Prabhakara K V, Priyanka M N
Prof Anil M, Namith P N

**P HOTO CORNER**

